ತ್ರಿಗುಣಾತೀತಾನಂದರು ಕಠೋರ ಸ್ವಭಾವದವರು. ಅವರು ಎಲ್ಲರೊಂದಿಗೂ ಆಶ್ಚರ್ಯಕರ ರೀತಿಯಲ್ಲಿ ಬೆರೆಯುತ್ತಿದ್ದರು. ಹುಡುಗರೊಂದಿಗೆ ಹುಡುಗರಂತೆ, ವೃದ್ಧರೊಂದಿಗೆ ವೃದ್ಧರಂತೆ; ಮಹಿಳೆಯರೂ ಅವರೊಂದಿಗೆ ಮಾತನಾಡಲು ಸಂಕೋಚಪಡುತ್ತಿರಲಿಲ್ಲ. ಅವರೂ ಕೂಡ ಅವರಲ್ಲೊಬ್ಬರಂತೆ ಇರಬಲ್ಲವರಾಗಿದ್ದರು. ಹುಡುಗರಲ್ಲಿ ಬ್ರಹ್ಮಚರ್ಯ ಪಾಲನೆಯ ಭಾವವನ್ನು ತುಂಬಲು ಸದಾ ಪ್ರಯತ್ನಶೀಲರಾಗಿದ್ದರು. ಹುಡುಗರು ಬಂದರೆ ಈ ವಿಷಯವಾಗಿ ಪ್ರಶ್ನಿಸುತ್ತಿದ್ದರು; ನಡುನಡುವೆ ಅವರೆಷ್ಟು ಮುಂದುವರಿದಿರುವರೆಂಬುದನ್ನು ತಿಳಿದುಕೊಳ್ಳುತ್ತಿದ್ದರು. ಅತ್ಯಂತ ಸರಳ ಸ್ವಭಾವದ ಅವರಿಗೆ ಪ್ರಪಂಚ ಜ್ಞಾನ ಎಳ್ಳಷ್ಟೂ ಇರಲಿಲ್ಲ – ಜಪಮಾಲೆಯನ್ನು ಕೊಳ್ಳಲು ದಿನಸಿ ಅಂಗಡಿಗೆ ಹೋಗುವರು!

ಸ್ವಾಮಿ ಯೋಗಾನಂದರು ಕಾಶಿಯಲ್ಲಿ ಕಠೋರ ತಪಸ್ಸಿನಲ್ಲಿ ತೊಡಗಿದ್ದರು – ಇಪ್ಪತ್ನಾಲ್ಕು ಗಂಟೆಗಳಲ್ಲಿ ೨೦ ಗಂಟೆಗಳು ಜಪ ಧ್ಯಾನಗಳಲ್ಲಿ ಕಳೆಯುತ್ತಿದ್ದರೇನೋ. ಪ್ರತಿದಿನವೂ ಭಿಕ್ಷೆಗೆ ಹೋದರೆ ಅದರಿಂದ ಬಹಳ ಸಮಯ ನಷ್ಟವಾಗುವುದೆಂದು ಒಂದು ದಿನ ಭಿಕ್ಷೆ ಬೇಡಿ, ದೊರಕಿದ ರೊಟ್ಟಿಗಳನ್ನು ಮೂರು-ನಾಲ್ಕು ದಿನಗಳು ತಿನ್ನುತ್ತಿದ್ದರು. ಇಂಥ ಕಠೋರತೆಯಿಂದ ಅವರ ದೇಹಾರೋಗ್ಯ ಕೆಟ್ಟಿತು. ಆಮಶಂಕೆಗೆ ತುತ್ತಾದರು. ಕಾಶಿಯಲ್ಲಿ ಅತ್ಯಂತ ಹೆಸರುವಾಸಿಯಾಗಿದ್ದ ಅವರು ಜನರ ಶ್ರದ್ಧಾಭಕ್ತಿಗಳಿಗೆ ಪಾತ್ರರಾಗಿದ್ದರು. ಒಮ್ಮೆ ಕಾಶಿಯಲ್ಲಿ ನಡೆದ ದಂಗೆಯಲ್ಲಿ ಸಾಧು – ಸಂನ್ಯಾಸಿಗಳ ಮೇಲೂ ದಬ್ಬಾಳಿಕೆ ಮಾಡಿದಾಗ, ಯಾರೂ ಯೋಗೀನ್ ಮಹಾರಾಜರ ಬಳಿ ಸುಳಿಯಲಿಲ್ಲ – 'ಅಲ್ಲಿ ಒಬ್ಬ ಒಳ್ಳೆಯ ಸಾಧುಗಳಿದ್ದಾರೆ. ಅವರನ್ನು ಶ್ರದ್ಧೆಯಿಂದ ಕಾಣಿರಿ' ಎನ್ನುತ್ತಿದ್ದರು.

ಶರತ್ ಮಹಾರಾಜರು ಕಾಶಿಯಲ್ಲಿ ತಪಸ್ಸು ಮಾಡಿ ಮಠಕ್ಕೆ (ಆಲಂಬಜಾರ್) ಮರಳಿದಾಗ ಅವರ ದೇಹ ಒಣಗಿ ಹೋಗಿತ್ತು. ಎದೆಯ ಎಲುಬುಗಳೂ ಶುಷ್ಕ ಕಟ್ಟಿಗೆಗಳಂತೆ ಎದ್ದು ಕಾಣುತ್ತಿದ್ದವು. ಕಾಶ್ಮೀರದ 'ಕ್ಷೀರಭವಾನಿ'ಯಲ್ಲಾದ ಆಧ್ಯಾತ್ಮಿಕ ಅನುಭೂತಿಯ ಬಳಿಕ ಸ್ವಾಮೀಜಿ, 'Kali the Mother' ಕವಿತೆಯನ್ನು ಬರೆದರು. ಅವರು ಆಗ ಬೇರೆಯೇ ಭಾವದಲ್ಲಿ, ಬೇರೆ ಜಗತ್ತಿನಲ್ಲಿ ಆಧ್ಯಾತ್ಮಿಕವಾದ ಮಹದಾನಂದವನ್ನು ಅನುಭವಿಸುತ್ತಿದ್ದರು. 'Kali the Mother' ಬರೆಯುತ್ತ ಅವರು ಬಿದ್ದುಬಿಟ್ಟರು – ಅವರ ಈ ಭಾವವನ್ನು ಅವರ ಶರೀರ ತಾಳದಾಯಿತೇನೋ! 'ದೃಶ್ಯಗಳು ಕಣ್ಣೆದುರು ಜೀವಂತವಾಗಿ ತೇಲಿಬರುತ್ತಿದ್ದವು' ಎಂದು ಅವರು ಹೇಳುತ್ತಿದ್ದರು. ಅವರು ಅವುಗಳನ್ನೆಲ್ಲ ಬರಿಯ ಕಪ್ಪು-ಬಿಳುಪಿನಲ್ಲಿ ಅಕ್ಷರಶಃ ಬರೆದು ಪ್ರಕಾಶಿಸಿದ್ದರು. ನಂತರವೂ ಸ್ವಾಮೀಜಿ ಈ ಪದ್ಯವನ್ನು ಪಠಿಸುವಾಗ ಅವರ ಮೂಗು-ಕಣ್ಣು-ಮುಖದ ಭಾವವು ಸಂಪೂರ್ಣ ಬದಲಾಗಿ, ಅವರೊಂದು ಉನ್ನತ ಜಗತ್ತಿಗೆ ತೆರಳುತ್ತಿದ್ದರು. ಆಗ ಅವರೆಡೆಗೆ ಕಣ್ಣು ಹಾಯಿಸಲು ಯಾರೂ ಧೈರ್ಯಮಾಡುತ್ತಿರಲಿಲ್ಲ.

ಬಾರಾನಗರದಲ್ಲಿದ್ದಾಗ ಠಾಕೂರರ ಶಿಷ್ಯಂದಿರು ತಮ್ಮ ಬಳಿಯಿದ್ದ ಜಪಮಾಲೆಗಳಿಂದ ಜಪ ಮಾಡುತ್ತಿದ್ದರು. ಠಾಕೂರರೇ ಅವುಗಳನ್ನು ಶುದ್ಧೀಕರಿಸಿ ಕೊಟ್ಟಿದ್ದರು. ಠಾಕೂರರು 'ಶುದ್ಧೀಕರಿಸುವುದು' ಎಂದರೇನು? ಅವರ ಸ್ಪರ್ಶ ಮಾತ್ರದಿಂದಲೇ ಅದು ಶುದ್ಧವಾಗುವುದು. ಬಾರಾನಗರದಲ್ಲಿ ಕೆಲವರ ಜಪಮಾಲೆ ಇದ್ದಕ್ಕಿದ್ದಂತೆ ಕಳೆದುಹೋದವು. ಹೇಗೆಂದು ಯಾರಿಗೂ ತಿಳಿಯಲಿಲ್ಲ. ಜಾಗ್ರತೆಯಾಗಿ ಪೆಟ್ಟಿಗೆಯಲ್ಲಿರಿಸಿದ್ದ ಜಪಮಾಲೆ ಕಾಣೆಯಾಗಲು ಕಾರಣವಿಲ್ಲ; ಅದು 'ಸಿದ್ಧಮಾಲೆ' – ಸರಿಯಾಗಿ ಜಪ ಮಾಡದೆ ಹೋದ್ದರಿಂದ ಅವುಗಳು ಅಂತರ್ಧಾನವಾಗಿವೆ ಎಂದು ಕೆಲವರಿಗೆ ಅನ್ನಿಸುತ್ತಿತ್ತು.

ಬಾಬುರಾಮ ಮಹಾರಾಜರು ವೃಂದಾವನದಲ್ಲಿ ತಪಸ್ಸು ಮಾಡುತ್ತಿದ್ದಾಗ, ಅವರನ್ನು ಅನೇಕರು ಶ್ರದ್ಧೆಯಿಂದ ಕಾಣುತ್ತಿದ್ದರು. ಅವರು ಸದಾ ವೈಷ್ಣವ ಭಾವದಲ್ಲಿರುತ್ತಿದ್ದರು –ವೈಷ್ಣವರಂತೆ ವಿನಯಿ. ಅವರಂತೆಯೆ ನಡೆನುಡಿಗಳು! ಠಾಕೂರರು ಬಾಬುರಾಮರನ್ನು 'ರಾಧೆಯ ಅಂಶ' ಎನ್ನುತ್ತಿದ್ದರು. ವೃಂದಾವನದಲ್ಲಿ ಅವರನ್ನು ಕಂಡೊಡನೆಯೇ ಇದು ಸ್ಪಷ್ಟವಾಗುತ್ತಿತ್ತು. ಅವರಿದ್ದ ಕೋಣೆಯಲ್ಲಿ ಠಾಕೂರರ ಒಂದು ಚಿಕ್ಕ ಚಿತ್ರವಿತ್ತು. ಅವರು ತಿರುಗಾಡಲು ಹೋದಾಗ ಈ ಚಿತ್ರವನ್ನು ತಮ್ಮ ಕತ್ತಿನಲ್ಲಿ ತೂಗಿಸಿಕೊಂಡು (ಅದು ಯಾರಿಗೂ ಕಾಣದಂತೆ, ಮೈಮೇಲೆ ಉತ್ತರೀಯವನ್ನು ಹೊದ್ದು) ಹೋಗುತ್ತಿದ್ದರು. ಅವರ ಮುಖವನ್ನು ನೋಡಿದರೆ ಅವರೊಬ್ಬ ಅದ್ಭುತ ವ್ಯಕ್ತಿ ಎಂದು ತಿಳಿಯುತ್ತಿತ್ತು. ಬಹುಶಃ ಅದರಿಂದಲೇ ಜನರು ಅವರನ್ನು ಗೌರವಿಸುತ್ತಿದ್ದರೇನೋ. ಹೊರಗಿನ (ಬೇಲೂರು ಮಠಕ್ಕೆ ಸೇರದ) ಸಾಧುಗಳನ್ನು ಕಂಡೊಡನೆಯೆ 'ರಾಧೆ, ರಾಧೆ' ಎನ್ನುತ್ತ ಅವರಿಗೆ ಶ್ರದ್ಧೆಯಿಂದ ನಮಸ್ಕರಿಸುತ್ತಿದ್ದರು. ಅವರು ನನಗೂ ಹೀಗೆ ಮಾಡುವುದನ್ನು ನಾನು ಇಷ್ಟಪಡುತ್ತಿರಲಿಲ್ಲ. ಬೆಳಗ್ಗೆ ಅವರು ಸುಮಾರು ೩ ಗಂಟೆಗಳ ಕಾಲ ಜಪ ಮಾಡುತ್ತಿದ್ದರು. ದಿನವಿಡೀ ಭಗವದ್ಭಾವಪೂರ್ಣರಾಗಿರುತ್ತಿದ್ದರು. ಅವರು ಬೇರೊಂದು ಭಾವದಲ್ಲಿರುತ್ತಿದ್ದರು. ಭಗವಂತನ ಸ್ಮರಣ-ಮನನದಲ್ಲಿ ಮನಸ್ಸನ್ನಿರಿಸಿರುವರೆಂದು ನೋಡಿದರೆ ತಿಳಿಯುತ್ತಿತ್ತು. ಕೆಲವೊಮ್ಮೆ ಮೌನವಾಗಿ ಕುಳಿತು ಭಗವತ್ ಚಿಂತನೆಯಲ್ಲಿರುತ್ತಿದ್ದರು. ಅವರು ಹೆಚ್ಚು ಮಾತನಾಡುತ್ತಿರಲಿಲ್ಲ. ಬಾಬುರಾಮ ಮಹಾರಾಜರೊಂದಿಗೆ ನಾನೊಮ್ಮೆ ಜಯರಾಂಬಾಟಿಗೆ ಹೋಗಿದ್ದೆ. ಈ ಕ್ಷೇತ್ರದಲ್ಲಿ ಠಾಕೂರರಿಗೆ ಸಂಬಂಧಿಸಿದ ಸ್ಥಳಗಳನ್ನು ಹಾಗೂ ಜನರನ್ನು ಭೇಟಿಯಾಗಲು ಅವರು ಬಹಳ ತವಕಿಸಿದರು. ಪ್ರತಿದಿನವೂ ಒಂದೊಂದು ಸ್ಥಳ, ಒಬ್ಬೊಬ್ಬ ವ್ಯಕ್ತಿಯನ್ನು ಕಾಣಲು ೮-೧೦ ಮೈಲುಗಳು ಹೋಗಿ, ಠಾಕೂರರ ಬಗ್ಗೆ ತಿಳಿಯುತ್ತಿದ್ದರು.

*(ಮುಂದುವರಿಯುವುದು)*

# ಪ್ರಥಮ ಪರಾಕ್ರಮ

## (ರಾಮಲಕ್ಷಣರಿಂದ ತಾಟಕಿಯ ವಧೆ, ವಿಶ್ವಾಮಿತ್ರರ ಬೋಧನೆ)

ಸುರೇಶ್ ಕುಮಾರ್

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥

ಮೊದಲ ಬಾರಿಗೆ ಧರ್ಮ ಸಂರಕ್ಷಣೆಗಾಗಿ ಶ್ರೀರಾಮನ ಹೆಗಲಿನಲ್ಲಿದ್ದ ಕೋದಂಡ ಕೈಗೆ ಬಂದಿತ್ತು. ಬಿಲ್ಲಿನ ನಾಣನ್ನು ಮೀಟಿದಾಗ ಹೊಮ್ಮಿದ ಟಂಕಾರದಿಂದ ದಿಕ್ಕುಗಳೆಲ್ಲ ಮೊಳಗಿದವು. ತಾಟಕಿಯು ರೋಷಾವಿಷ್ಟಳಾಗಿ ಕ್ರೋಧ ಸಂರಕ್ತ ಕಣ್ಣುಗಳಿಂದ ಶಬ್ದ ಬಂದ ದಿಕ್ಕಿನತ್ತ ನುಗ್ಗಿದಳು.

ರಾಮನು ದೇಶಕ್ಕಾಗಿಯೇ ಇವಳನ್ನು ವಧಿಸುವೆನೆಂದು ಕೆಲವು ಕ್ಷಣಗಳಿಗೆ ಮೊದಲು ಘೋಷಿಸಿದ್ದ. ತಂದೆಯ ಮಾತಿಗೆ ನಿಷ್ಠನೆಂದು ಸಾರಿದ್ದ. ಗುರುವಿನ ಆದೇಶಕ್ಕೆ ತಲೆಬಾಗುವೆನೆಂದಿದ್ದ. ಈಗ ಅವನ ನಿಲುವೇನು? ರಾಮನು, ''ಲಕ್ಷ್ಮಣ, ಮಹಿಳೆಯೆಂಬುದೇ ರಕ್ಷಣೆಯಾಗಿರುವ ಇವಳನ್ನು ಕೊಲ್ಲಲು ನನಗೆ ಮನಸ್ಸಿಲ್ಲ. ಕೈ-ಕಾಲು, ಕಿವಿ ಮೂಗುಗಳನ್ನು ಕತ್ತರಿಸಿ ಇವಳು ಓಡಿ ಹೋಗುವಂತೆ ಮಾಡುವೆನು. ಇವಳ ಸಂಚಾರ ಶಕ್ತಿಯನ್ನು ಉಡುಗಿಸುವದೇ ನನ್ನ ಉದ್ದೇಶ'' ಎಂದನು. ಅಷ್ಟರಲ್ಲಿ ತಾಟಕಿ ಸಿಟ್ಟಿನಿಂದ ನುಗ್ಗಿದಳು. ರಾಮ-ಲಕ್ಷ್ಮಣರ ಕಡೆಗೇ ಧಾವಿಸಿ ಮರ, ಬಂಡೆಗಳನ್ನು ಕಿತ್ತಸೆಯುತ್ತಿದ್ದಳು. ಅವರು ಬಾಣಗಳಿಂದ ಚಪ್ಪರ ನಿರ್ಮಿಸಿ ಬೀಳುತ್ತಿದ್ದ ವಸ್ತುಗಳನ್ನು ತಡೆದರು.

### ಹಿಂದೆ ಗುರು, ಮುಂದೆ ಗುರಿ!

ಇವೆಲ್ಲವನ್ನೂ ವಿಶ್ವಾಮಿತ್ರರು ಕೂಲಂಕಷವಾಗಿ ಗಮನಿಸುತ್ತಿದ್ದರು. ತಾಟಕಿಯನ್ನು ಕೊಲ್ಲುವೆನೆಂದಿದ್ದ ರಾಮನ ಮಾತು, ಕ್ರಿಯೆಗಳನ್ನು ಅವಲೋಕಿಸಿದರು. ಅವನ ಮಾತುಗಳನ್ನು ಕೇಳಿ ಸಂತುಷ್ಟರಾದರು. ಏಕೆ? ಅವನು ಮಾಡಬೇಕಾದ್ದನ್ನು ಮಾಡುತ್ತಿಲ್ಲ. ಆದರೂ...? ಮಾಡಬೇಕಾದ ದಾರಿಯಲ್ಲಿ ಹೆಜ್ಜೆಯಿಟ್ಟಿದ್ದಾನೆ. ಅವನ ಉತ್ಸಾಹದ ಎಳೆಯನ್ನೇ ಹಿಡಿದು, ಆ ಎಳೆಗಳನ್ನು ಬಿಗಿದು ಹುರಿಮಾಡಿ ಗಟ್ಟಿ ಮಾಡುತ್ತಿದ್ದಾರೆ. ದೊಡ್ಡ ಕೆಲಸ ಮಾಡುವಾಗ ಪ್ರಾರಂಭವಾಗುವುದು ಸಣ್ಣದಾಗಿಯೇ. ಸಾವಿರಾರು ಮೈಲಿಗಳ ಯಾತ್ರೆ ಆರಂಭವಾಗುವುದು ಒಂದು ಸಣ್ಣ ಹೆಜ್ಜೆಯಿಂದ. ಮಹಾಕಾವ್ಯ ಪ್ರಾರಂಭವಾಗುವುದು ಅಕ್ಷರವೊಂದರಿಂದ, ಪುಟ್ಟ ಘಟನೆಯಿಂದ. ಸಣ್ಣದಾಗಿ ಪ್ರಾರಂಭವಾದಾಗ ಅದನ್ನೇ ಪ್ರೋತ್ಸಾಹಿಸಬೇಕು. ಅದನ್ನು ತೆಗಳದೆ, ದಾರಿ ತಪ್ಪಿಸದೆ, ಹಾದಿಯನ್ನು ವಿಸ್ತಾರಗೊಳಿಸಿ ಸುಗಮವಾಗಿಸಬೇಕು. ವಿಶ್ವಾಮಿತ್ರರು ಅದನ್ನೇ ಮಾಡುತ್ತಿದ್ದಾರೆ. ಶಿಷ್ಯರೊಡನೆ ಬೆರೆತರು ಜಗದ್ಗುರು. ರಾಮನೊಡನೆ ಅವರೂ ಸೇರಿದರು. ತಾಟಕಿಯನ್ನು ದಿಟ್ಟಿಸಿ ಹುಂಕಾರಗೈದರು.



ಕಲೆ: ರಾಜಾ ರವಿವರ್ಮ

''ರಾಮ, ಲಕ್ಷ್ಮಣರಿಗೆ ಮಂಗಳವಾಗಲಿ, ವಿಜಯವಾಗಲಿ'' ಎಂದು ಘೋಷಿಸಿದರು. ಕಿರಿಯರು ಒಳಿತೆಸಗುವಾಗ ಹಿರಿಯರು ಮರೆಯಲ್ಲಿ ನಿಂತು ತಪ್ಪದೆ ಮಾಡಬೇಕಾದ ಕಾರ್ಯವಿದು. ಕಿರಿಯರನ್ನು ಧರ್ಮ ಕಾರ್ಯದಲ್ಲಿ ತೊಡಗಿಸುವ ವಿಧಾನವಿದು.

ರಾಮನು ಕ್ರುದ್ಧನಾದನು. ಜೊತೆಯಲ್ಲಿಯೇ ಲಕ್ಷ್ಮಣನೂ ಸಿಟ್ಟಿಗೆದ್ದನು. ಇದು ಆದರ್ಶದ ಭ್ರಾತೃತ್ವ. ಅಣ್ಣ-ತಮ್ಮಂದಿರಲ್ಲಿ ಸಿಟ್ಟಿನಲ್ಲಿಯೂ ಹೊಂದಾಣಿಕೆ. ತಮ್ಮ ಜೀವನದಲ್ಲಿ ದುಷ್ಟ ಶಕ್ತಿ ನಿಗ್ರಹವನ್ನು ಒಟ್ಟಿಗೇ ಪ್ರಾರಂಭಿಸಿ ಕಾರ್ಯ ಪ್ರವೃತ್ತರಾಗಿದ್ದಾರೆ. ಅವರೆಡೆಗೆ ತಾಟಕಿ ನುಗ್ಗಿದಳು. ಮರುಕ್ಷಣದಲ್ಲಿಯೇ ರಾಮನು ಅವಳ ಕೈಗಳನ್ನು ಕತ್ತರಿಸಿದನು. ಅವಳು ನೋವಿನಿಂದ ಚೀರುವಾಗ ಲಕ್ಷ್ಮಣನು ಅವಳ ಕಿವಿ, ಮೂಗುಗಳನ್ನು ತರಿದನು.

ವಿಶ್ವಾಮಿತ್ರರು ಮತ್ತೆ ರಾಮನನ್ನು ಪ್ರೇರೇಪಿಸಿದರು. ''ರಾಮ, ಹೆಂಗಸೆಂಬ ದಯೆ ಬೇಡ. ಇವಳೇ ನಾನು ಹೇಳಿದ ಘಾತಕಿ.

ಈಗಾಗಲೆ ಸಂಜೆಯಾಗುತ್ತಿದೆ. ಸಂಜೆಯ ನಂತರ ರಾಕ್ಷಸರ ಶಕ್ತಿ ಹೆಚ್ಚುವುದು. ಅಷ್ಟರೊಳಗೆ ಇವಳನ್ನು ಸಂಹರಿಸಬೇಕು'' ಎಂದರು. ತಾಟಕಿ ಪ್ರತ್ಯಕ್ಷಳಾದಳು. ಸೋದರರಿಬ್ಬರ ಮೇಲೆ ರಭಸದಿಂದ ಮುಂದೆ ನುಗ್ಗಿದಳು. ಆಗ ರಾಮನ ಕರ್ತವ್ಯಪ್ರಜ್ಞೆ ವಿಜೃಂಭಿಸಿತು. ಗುರುವಿನ ಸಾನ್ನಿಧ್ಯದಲ್ಲಿ ಜಗತ್ತಿಗೇ ರಾಮನ ಸತ್ಯ ಪರಾಕ್ರಮ ತಿಳಿಯುವುದಿತ್ತು. ಬಲಗೈ ಬತ್ತಳಿಕೆಯೆಡೆಗೆ ಸಾರಿತು. ಶಬ್ದವೇಧಿ ತಂತ್ರ ಮನಸ್ಸಿನಲ್ಲಿ ಸ್ಫುರಿಸಿತು. ಮರುಕ್ಷಣದಲ್ಲಿಯೇ ಅವಳೆದೆಗೆ ಗುರಿಯಿಟ್ಟು ಹೊಡೆದ. ಆ ಬಾಣವೊಂದರಿಂದಲೇ ಅವಳೆದೆ ಸಿಗಿಯಿತು. ಭೀಮಾಕಾರದ ರಾಕ್ಷಸಿ ಸತ್ತು ಧರೆಗುರುಳಿದಳು. ತಿರೆಯಲ್ಲಿ ತಾಟಕಿಯ ತಾಪ ತಣಿಯಿತು.

### ದೇವತೆಗಳ ಪ್ರಶಂಸೆ

ಗುರುವಿನ ದಿಗ್ದರ್ಶನದಲ್ಲಿ ಮೆರೆದ ರಾಮನ ಪೂರ್ಣ ಪರಾಕ್ರಮವನ್ನು ಮನಃಪೂರ್ವಕವಾಗಿ ದೇವತೆಗಳು ಕೊಂಡಾಡಿದರು. ತೃಪ್ತನಾದ ಇಂದ್ರನು ''ವಿಶ್ವಾಮಿತ್ರರೆ, ನಿಮಗೆ ಒಳಿತಾಗಲಿ. ನಿಮ್ಮ ಕಾರ್ಯನಿರ್ವಹಣೆಯಿಂದ ನಾವೆಲ್ಲರೂ ಸಂತುಷ್ಟರಾಗಿದ್ದೇವೆ. ರಾಘವನಲ್ಲಿ ಸಂತುಷ್ಟರಾಗಿರುವ ನೀವು, ಅವನಲ್ಲಿ ಮತ್ತಷ್ಟು ವಾತ್ಸಲ್ಯವನ್ನು ಹೆಚ್ಚಿಸಿರಿ. ದೇವತಾ ಸ್ವರೂಪದ ಮಂತ್ರಾಸ್ತ್ರಗಳನ್ನು ಅರ್ಹನಾಗಿರುವ ರಾಮನಿಗೆ ಉಪದೇಶಿಸಿರಿ. ಸಜ್ಜನರಿಗಾಗಿ ಇವನಿನ್ನೂ ಮಹತ್ತರವಾದ ಕೆಲಸವನ್ನು ಮಾಡಬೇಕಾಗಿದೆ'' ಎಂದು ತೆರಳಿದನು.

### ಅಸ್ತ್ರಾಸ್ತ್ರಗಳ ಉಪದೇಶ

ಪರಾಕ್ರಮದ ಪ್ರವೇಶ ಪರೀಕ್ಷೆಯಲ್ಲಿ ಸೋದರರು ವಿಜೇತರಾಗಿ ಪುರಸ್ಕೃತರಾಗಿದ್ದರು. ತಂದೆಯ ಮಾತಿನಂತೆ, ಗುರುವಿನ ಆಣತಿಯಂತೆ, ತಾನು ಗುರುವಿಗೆ ಕೊಟ್ಟ ವಚನದಂತೆ ಆಚಾರಶೀಲನಾಗಿದ್ದ ರಾಮ. ತನ್ನ ಅಪ್ರತಿಮ ಸಾಹಸದಿಂದ ಗುರುವಿನ ಹೃದಯದ ಸಿಂಹಾಸನದಲ್ಲಿ ಮೆಚ್ಚಿನ, ನೆಚ್ಚಿನ ಶಿಷ್ಯನಾಗಿ ವಿರಾಜಮಾನನಾಗಿದ್ದ. ಶಿಷ್ಯತ್ವವನ್ನು ಅರ್ಥಪೂರ್ಣ ಮಾಡಿದ್ದ. ಮಂದಸ್ಮಿತರಾಗಿ ವಿಶ್ವಾಮಿತ್ರರು ಮಧುರ ಧ್ವನಿಯಿಂದ ಶಿಷ್ಯನಿಗೆ ಪ್ರೀತಿಪೂರ್ವಕವಾಗಿ ಹೇಳಿದರು: ''ರಾಮ, ಅಭಿರಾಮ! ನಿನ್ನಿಂದ ತಾಟಕಿಯೆಂಬ ಕಂಟಕ ಕಳೆಯಿತು. ನಿನಗೆ ಶುಭ-ಮಂಗಳವಾಗಲಿ. ನಿನ್ನ ಸತ್ಯ ಪರಾಕ್ರಮವನ್ನು ಕಂಡು ನಾನು ಆನಂದಿತನಾಗಿರುವೆ. ನಿನಗೀಗ ಮಂತ್ರಾಸ್ತ್ರಗಳನ್ನು ಉಪದೇಶಿಸುವೆ. ಅವುಗಳ ಬಲದಿಂದ ನೀನು ದೇವಾಸುರ, ಗಂಧರ್ವ, ಉರಗರನ್ನು ಸಮರದಲ್ಲಿ ಸೋಲಿಸಲು ಸಮರ್ಥನಾಗುವೆ. ಇಗೋ ಸ್ವೀಕರಿಸು'' ಎಂದರು. ಕೂಡಲೇ ರಾಮನು ಆಚಮನ ಮಾಡಿ ಸಿದ್ಧನಾದನು. ಪ್ರತಿಯೊಂದೂ ಕ್ರಮಬದ್ಧವಾಗಿ ಸಾಗುತ್ತಿದೆ. ವಿಶ್ವಾಮಿತ್ರರು ಶುಚಿರ್ಭೂತನಾದ ರಾಮನಿಗೆ ಐವತ್ತು ಮಂತ್ರಾಸ್ತ್ರಗಳನ್ನು ಉಪದೇಶಿಸಿದರು.

ಪ್ರಯಾಣ ಮುಂದುವರಿದಾಗ ರಾಮನು, ''ಗುರುಗಳೆ, ತಮ್ಮ ಅನುಗ್ರಹ ರೂಪದ ಅಸ್ತ್ರಾಸ್ತ್ರಗಳ ಉಪದೇಶದಿಂದ ನಾನು ದೇವತೆಗಳಿಗೂ ಅಜೇಯನಾಗಿರುವೆ. ಆದರೆ ಇವುಗಳ ಉಪಸಂಹಾರ ಕ್ರಮವೇ ತಿಳಿದಿಲ್ಲವಲ್ಲ. ಅದನ್ನು ತಿಳಿಯಲಿಚ್ಛಿಸುವೆ'' ಎಂದು ಪ್ರಾರ್ಥಿಸಿದನು. ಅಸ್ತ್ರದ ಪ್ರಯೋಗವಾದ ಮೇಲೆ ಅದರ ಉಪಸಂಹಾರವಾಗಬೇಕು. ಆ ಅಸ್ತ್ರ ಹಿಂತಿರುಗಿ ಬತ್ತಳಿಕೆ ಸೇರಬೇಕು. ಇಲ್ಲವಾದಲ್ಲಿ ಲೋಕಪೀಡನೆಯಾಗುವುದು. ರಾಮನ ಕಾರ್ಯ ಲೋಕರಕ್ಷಣೆಯದು. ಆ ಲೋಕ ರಕ್ಷಣೆಯ ಕಾರ್ಯದಲ್ಲಿರುವ ರಾಮನ ಜಾಗರೂಕತೆಯನ್ನು ಪರೀಕ್ಷಿಸಲು ವಿಶ್ವಾಮಿತ್ರರು ಉಪಸಂಹಾರದ ಕ್ರಮ ತಿಳಿಸಿರಲಿಲ್ಲ. ರಾಮನ ಮಾತುಗಳಿಂದ ಸತ್ಯ ಸಂಕಲ್ಪ ತಪೋನಿಧಿಗಳು ಸಂತುಷ್ಟರಾದರು. ಉಪಸಂಹಾರದ ಕ್ರಮಗಳನ್ನೆಲ್ಲ ಬೋಧಿಸಿದರು. ಉಳಿದ ಐವತ್ತು ಅಸ್ತ್ರಗಳನ್ನೂ ಉಪದೇಶಿಸಿದರು.

ಎಲ್ಲ ಅಸ್ತ್ರಗಳು ದಿವ್ಯರೂಪದಿಂದ ಶ್ರೀರಾಮನ ಮುಂದೆ ಪ್ರತ್ಯಕ್ಷವಾದವು. ಅವುಗಳು ಪ್ರಜ್ವಲಿಸುವ ಅಗ್ನಿಯಂತೆ, ಬೆಳಗುವ ಸೂರ್ಯ-ಚಂದ್ರರಂತೆ ಕಂಗೊಳಿಸುತ್ತಿದ್ದವು. ಅವುಗಳು ಕೈಮುಗಿದುಕೊಂಡು ಮಧುರವಾಗಿ, ''ಪುರುಷೋತ್ತಮ ರಾಘವ! ನಿನಗೆ ಶುಭವಾಗಲಿ. ನಿನ್ನ ಸೇವಕರಾದ ನಾವು ನೀನು ಬಯಸಿದ್ದೆಲ್ಲವನ್ನೂ ಮಾಡಿಕೊಡುತ್ತೇವೆ. ರಾಮ, ಸೇವೆಗೆ ಅಪ್ಪಣೆಯಾಗಲಿ'' ಎಂದು ಕೈಮುಗಿದು ಪ್ರಾರ್ಥಿಸಿದವು. ವಿನಯವಂತನಾದ ರಾಮನು ಪ್ರಸನ್ನಾತ್ಮನಾಗಿ, ಅವುಗಳನ್ನು ಸ್ಪರ್ಶಿಸಿ, ಸಂತೈಸಿದನು. ''ನೀವೆಲ್ಲರೂ ನನ್ನ ಹೃದಯದಲ್ಲಿ ವಾಸಿಸಿರಿ. ಅಗತ್ಯವಿದ್ದಾಗ ಸ್ಮರಣೆ ಮಾಡುವೆ. ಆಗ ಬಂದು ಸಹಕರಿಸಿರಿ'' ಎಂದು ಪ್ರೀತಿಯಿಂದ ಸೂಚಿಸಿದನು. ಅವುಗಳೆಲ್ಲವೂ ರಾಮನಿಗೆ ಪ್ರದಕ್ಷಿಣೆ ಮಾಡಿ ತೆರಳಿದವು. ಯಾವುದೇ ಬಲವತ್ತರವಾದದ್ದು, ವಿಶೇಷವಾದದ್ದು ನಮ್ಮ ವಶದಲ್ಲಿದ್ದರೂ ಆವಶ್ಯಕತೆಯಿದ್ದಾಗ ಉಪಯೋಗಿಸುವ ಸರಳತೆಯನ್ನು ರಾಮನು ತೋರಿಸಿಕೊಟ್ಟಿದ್ದಾನೆ. ಸೂಚನೆ ಎನ್ನುವುದು ನಡವಳಿಕೆಗೆ ನಿರ್ದೇಶನವೇ ಹೊರತು ಆದೇಶವಲ್ಲ. ಆದರೆ ಇಂದು ನಾವು ಸೂಚನೆಯನ್ನೇ ಆಜ್ಞೆಯಂತೆ ತಿಳಿಸುತ್ತೇವೆ.

### ಅದ್ಭುತ ಗುರು - ಅದ್ಭುತ ಶಿಷ್ಯ

ಗುರುವಿನ ಚರಣಕ್ಕೆ ಶರಣಾಗಿ ಅವನ ಹೃನ್ಮನದ ಕೃಪೆಗೆ ಪಾತ್ರರಾಗುವಂತಹ ನಡೆ ಶಿಷ್ಯನದ್ದಾಗಿರಬೇಕು. ಅದೇ ಸಮಯದಲ್ಲಿ ಗುರುವಿನ ವ್ಯಕ್ತಿತ್ವವು ಶಿಷ್ಯನಿಗೆ ಈ ನಿಟ್ಟಿನಲ್ಲಿ ಪ್ರೇರಣೆ ನೀಡುವಂತಿರಬೇಕು. ಇವೆರಡರಿಂದ ಮಾತ್ರ ವಿಶ್ವಾಮಿತ್ರರಂತಹ ಗುರು–ರಾಮನಂತಹ ಶಿಷ್ಯರು ರೂಪುಗೊಳ್ಳುವರು. ಒಂದು ಬಾರಿ ಗುರುವಿನಲ್ಲಿ ವಿಶ್ವಾಸವಿಡಬೇಕು. ಅವನ ವಿಶ್ವಾಸವನ್ನು ಗಳಿಸಬೇಕು. ಆಗ ಎಲ್ಲವೂ ನಮ್ಮನ್ನು ಹುಡುಕಿಕೊಂಡು ಬರುವುವು. ರಾಮನು ಕೇಳಿದ ಉಪಸಂಹಾರ ಕ್ರಮದೊಡನೆ ಮತ್ತೂ ಐವತ್ತು ಅಸ್ತ್ರಗಳ ವಿಶೇಷ ಬಳುವಳಿಯೂ ಬಂದಿತ್ತು. ವಿದ್ಯೆಯನ್ನು ಶ್ರದ್ಧೆಯಿಂದ ಕಲಿತಾಗ ಅದರಲ್ಲಿ ಪ್ರಭುತ್ವ ತಾನಾಗಿಯೇ ಬರುವುದು. ವಿದ್ಯಾರಾಧನೆಗೆ ಸದಾ ಉತ್ಸುಕರಾಗಿ ನಮ್ಮಲ್ಲಿ ಶ್ರದ್ಧೆ, ಪ್ರೀತಿ, ಒಲವು, ನಲ್ಮೆಗಳಿದ್ದಾಗ ಅದು ನಮಗೊಲಿಯುವುದು.

ಅವರ ಪ್ರಯಾಣ ಮುಂದುವರಿಯಿತು. ರಾಮನು ಮಧುರ ಸ್ವರದಿಂದ ಪ್ರಶ್ನಿಸಿದನು: ''ಭಗವನ್, ಹಿತಕರವಾದ ಈ ಸ್ಥಾನವೆಂದು ತೋರುವ ಇದು ಯಾರ ಆಶ್ರಮ? ನಿಮ್ಮ ಯಜ್ಞಕ್ಕೆ ವಿಘ್ನ ಮಾಡುವ ಪಾಪಿಗಳಾದ, ದುರಾತ್ಮರಾದ ಆ ರಾಕ್ಷಸರು